# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 176 | Pages. 2 | Date: 20-06-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 176 – ಪುಟಗಳು : 2 | 20-06-2026 ಶನಿವಾರ | Ph: 8762954248 | ದರ : ₹1


# ದೇವರಾಣೆ ಮಾಡುವೆ ಪಕ್ಷಕ್ಕೆ ಮೋಸ ಮಾಡಿಲ್ಲ

## ಅಡ್ಡ ಮತದಾನ ವದಂತಿಗೆ ಹೆಚ್.ಕೆ.ಸುರೇಶ್ ಭಾವುಕ ಪತ್ರ | ಸತ್ಯಾಸತ್ಯತೆ ಪರಿಶೀಲನೆಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಷ್ಟ್ರೀಯ ಸ್ವಯಂ ಸೇವಕನಾಗಿ ರಾಜಕೀಯಕ್ಕೆ ಬಂದಿರುವ ನಾನು ಪಕ್ಷಕ್ಕೆ ದ್ರೋಹ ಮಾಡಿಲ್ಲ, ಬೇಕಾದರೆ ಬೇಲೂರು ಚನ್ನಕೇಶವ ಸ್ವಾಮಿ ಅಥವಾ ಧರ್ಮಸ್ಥಳ ಮಂಜುನಾಥ ಸ್ವಾಮಿ ಮೇಲೆ ಆಣೆ ಪ್ರಮಾಣ ಮಾಡುತ್ತೇನೆ ಎಂದು ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಹೇಳಿದ್ದಾರೆ.

ರಹಸ್ಯ ಮತದಾನವಾದ್ದರಿಂದ ಯಾರು ಯಾರಿಗೆ ಮತದಾನ ಹಾಕಿದ್ದಾರೆಂಬುದು ಗೊತ್ತಾಗುವುದಿಲ್ಲ. ಆದರೆ, ಕಾಂಗ್ರೆಸ್‌ಗೆ 11 ಹೆಚ್ಚುವರಿ ಮತಗಳು ಬಿಜೆಪಿ ಹಾಗು ಜೆಡಿಎಸ್ ಶಾಸಕರಿಂದ ದೊರೆತಿವೆ. ಅದರಲ್ಲಿ ಶಾಸಕ ಹೆಚ್.ಕೆ.ಸುರೇಶ್ ಅವರ ಹೆಸರು ತಳುಕು ಹಾಕಿಕೊಂಡಿದೆ.

ಈ ಆರೋಪವನ್ನು ಅಲ್ಲಗಳೆದಿರುವ ಸುರೇಶ್ ಅವರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸುದೀರ್ಘ ಪತ್ರದ ಮೂಲಕ ಸ್ಪಷ್ಟನೆ ನೀಡಿದ್ದಾರೆ.

ನನ್ನ ತಾಯಿ ಇತ್ತೀಚೆಗೆ ನಿಧನರಾಗಿದ್ದಾರೆ. ಜನ್ಮ ಕೊಟ್ಟ ತಾಯಿ ಅಥವಾ ಪಕ್ಷಕ್ಕೆ, ಮತ ನೀಡಿದ ಕ್ಷೇತ್ರದ ಜನರಿಗೆ ದ್ರೋಹ ಮಾಡುವುದಿಲ್ಲ. ರಾಜಕೀಯ ಏಳಿಗೆ ಸಹಿಸದವರು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಈ ಬೆಳವಣಿಗೆಯಿಂದ ಭಾರೀ ನೋವಾಗಿದೆ ಎಂದಿದ್ದಾರೆ.



ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರ ಆದೇಶದ ಮೇರೆಗೆ ಮೊದಲ ಪ್ರಾಶಸ್ತ್ಯದ ಮತವನ್ನು ಬಿಜೆಪಿ ಅಭ್ಯರ್ಥಿ ಎಂ.ರಂಗರಾಜು ಪಾಟೀಲ್ ಹಾಗೂ ಎರಡನೇ ಪ್ರಾಶಸ್ತ್ಯದ ಮತವನ್ನು ಜೆಡಿಎಸ್‌ನ ಗೋವಿಂದರಾಜು ಅವರಿಗೆ ಹಾಕಿದ್ದೇನೆ ಎಂದಿದ್ದಾರೆ.

### ಸಂಬಂಧಿಕರ ಮನೆಗೆ ಹೋಗಿದ್ದೆ

ಪಕ್ಷ ಮತ್ತು ಸಂಘಟನೆಗೆ ಪ್ರಾಮಾಣಿಕವಾಗಿ ದುಡಿಯುತ್ತಿರುವ ನನ್ನ ಮೇಲೆ ಮತಕೇಂದ್ರಕ್ಕೆ ತಡವಾಗಿ ಹೋಗಿರುವುದನ್ನೇ ಅಸ್ತ್ರವಾಗಿಸಿಕೊಂಡು ಇಲ್ಲಸಲ್ಲದ ಆರೋಪ ಮಾಡಲಾಗುತ್ತಿದೆ. ಗುರುವಾರ ರಾಘವೇಂದ್ರ ಸ್ವಾಮಿ ದಿನವಾಗಿದ್ದರಿಂದ ಸಂಬಂಧಿಕರ ಮನೆಗೆ ತೆರಳಿದ್ದೆ. ಹೀಗಾಗಿ ಮತ ಚಲಾವಣೆಗೆ ಹೋಗುವುದು ತಡವಾಯಿತು ಹೊರತು ಅನ್ಯ ಉದ್ದೇಶದಿಂದ ಅಲ್ಲವೆಂದು ಅವರು ಹೇಳಿದ್ದಾರೆ. ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ನನ್ನ ವಿರುದ್ಧ ವಿವಿಧ ರೀತಿಯ ಊಹಾಪೋಹ ಹಾಗೂ ಆಧಾರ ರಹಿತ ಸುದ್ದಿಗಳು ದೃಶ್ಯ ಮಾಧ್ಯಮಗಳಲ್ಲಿ ಬಿತ್ತರವಾಗಿದೆ. ಇದರಿಂದ ನನಗೆ ಮತ್ತು ಕುಟುಂಬಸ್ಥರಿಗೆ ಭಾರೀ ನೋವಾಗಿದೆ ಎಂದು ಸುರೇಶ್ ಹೇಳಿದ್ದಾರೆ.

> ಎರಡು ಚುನಾವಣೆಗಳಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರೂ ದೇವರ ದಯೆಯಿಂದ ಆರ್ಥಿಕವಾಗಿ ಚೆನ್ನಾಗಿದ್ದೇನೆ. ಯಾವುದೇ ಆಮಿಷಕ್ಕೆ ಬಲಿಯಾಗುವ ಅವಶ್ಯಕತೆಯಿಲ್ಲ. ಅನ್ಯ ಪಕ್ಷದವರಿಗೆ ಜೊತೆ ಗುರುತಿಸಿಕೊಳ್ಳುವ ಅವಶ್ಯಕತೆಯೂ ಇಲ್ಲ.
>
> **– ಹೆಚ್.ಕೆ.ಸುರೇಶ್, ಬಿಜೆಪಿ ಶಾಸಕ**

### ಮೋದಿಗೆ ಮೋಸ ಮಾಡುವುದಿಲ್ಲ

ನಾನು ಹಿಂದುತ್ವ, ಸಂಘ ಪರಿವಾರ, ಪಕ್ಷದ ಸಿದ್ಧಾಂತ ಮತ್ತು ಶಿಸ್ತುಗಳಿಗೆ ಬದ್ಧನಾಗಿದ್ದು, 2005ರಲ್ಲಿ ಪಕ್ಷ ಸಂಘಟನೆ ಮೇಲೆ ವಿಶ್ವಾಸವಿಟ್ಟು 300 ಮತಗಳು ಬೀಳುವಂತಹ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ಸಂಘಟನೆ ಆರಂಭಿಸಿದೆ. ಇಷ್ಟು ವರ್ಷಗಳ ಕಾಲ ನಿಷ್ಠಾವಂತ ಕಾರ್ಯಕರ್ತನಾಗಿ ಯಶಸ್ಸನ್ನು ಸಾಧಿಸಿದ್ದೇನೆ. ಕೆಲವು ಮುಖಂಡರು ನನ್ನ ಮೇಲೆ ಮಾಡುತ್ತಿರುವ ಆರೋಪಗಳು ಸಂಪೂರ್ಣ ನಿರಾಧಾರವಾಗಿವೆ. ಇಂತಹ ಸುಳ್ಳು ಹಾಗೂ ದುರುದ್ದೇಶಪೂರಿತ ಹೇಳಿಕೆಗಳಿಂದ ನನ್ನ ವೈಯಕ್ತಿಕ ಘನತೆಗೆ, ರಾಜಕೀಯ ಭವಿಷ್ಯಕ್ಕೆ ಹಾಗು ಹಲವಾರು ವರ್ಷಗಳಿಂದ ಪಕ್ಷಕ್ಕಾಗಿ ಮಾಡಿದ ಸೇವೆಗೆ ಅನಗತ್ಯ ಹಾನಿಯಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರೇ ಕ್ಷೇತ್ರಕ್ಕೆ ಬಂದು ನನ್ನ ಪರವಾಗಿ ಪ್ರಚಾರ ಮಾಡಿದ್ದರು. ಅಂತಹ ಮಾತ್ರ ಪಕ್ಷಕ್ಕೆ ದ್ರೋಹ ಬಗೆಯುವ ಕೆಲಸ ಯಾವತ್ತೂ ಮಾಡುವುದಿಲ್ಲ.

ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಪಾಲ್ಗೊಂಡಿಲ್ಲವೆಂದು ಧರ್ಮಸ್ಥಳ ಮಂಜುನಾಥ ಸ್ವಾಮಿ ಮೇಲೆ ಪ್ರಮಾಣ ಮಾಡುತ್ತೇನೆ. ನನ್ನ ಘನತೆ ಮತ್ತು ರಾಜಕೀಯ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಉದ್ದೇಶದಿಂದ ಕೆಲವರು ನನ್ನ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಈ ಬಗ್ಗೆ ಸತ್ಯಾಸತ್ಯತೆ ಪರಿಶೀಲಿಸಬೇಕೆಂದು ಅವರು ಪತ್ರದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಕೋರಿದ್ದಾರೆ.

# ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಸಿಐಡಿ ವಶಕ್ಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಜೆಡಿಎಸ್ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಆಡಳಿತಾವಧಿಯಲ್ಲಿ ನಡೆದಿದ್ದ ಬಗರ್ ಹುಕುಂ ಸಮಿತಿಯ ಮಂಜೂರಾತಿಯಲ್ಲಿ ಅಕ್ರಮವೆಸಗಿದ್ದ ಆರೋಪಕ್ಕೆ ಸಂಬಂಧಿಸಿ ಸಿಐಡಿ ಅಧಿಕಾರಿಗಳು ಕೆ.ಎಸ್.ಲಿಂಗೇಶ್ ಅವರನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರಿನಿಂದ ಶುಕ್ರವಾರ ಆಗಮಿಸಿದ್ದ ಸಿಐಡಿ ಪೊಲೀಸರ ತಂಡ ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಸೇರಿದಂತೆ 30 ಮಂದಿ ಸಿಬ್ಬಂದಿಯನ್ನು ವಶಕ್ಕೆ ಪಡೆಯುವುದರೊಂದಿಗೆ ಸುಮಾರು ಐದು ವರ್ಷದ ಹಿಂದೆ ನಡೆದಿದ್ದ ಪ್ರಕರಣಕ್ಕೆ ಜೀವ ಪಡೆದಿದೆ. 2023ರಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ ಜೆಡಿಎಸ್ ಜಿಲ್ಲಾಧ್ಯಕ್ಷರು ಆಗಿರುವ ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಅವರು ಅಂದೇ ನ್ಯಾಯಾಲಯದಲ್ಲಿ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು.

ಅಕ್ರಮವೆಸಗಿದ್ದ ಆರೋಪದಡಿ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕ, ಅಂದಿನ ತಹಸೀಲ್ದಾರ್ ಸೇರಿ 30 ಮಂದಿಯನ್ನು ತಮ್ಮ ಸುಪರ್ದಿಗೆ ಪಡೆದಿದ್ದಾರೆಂದು ಹೇಳಲಾಗಿದೆ. ಬೆಳಿಗ್ಗೆ ಸುಮಾರು 5 ಗಂಟೆ ಸಮಯದಲ್ಲಿ ಕೆ.ಎಸ್. ಲಿಂಗೇಶ್ ಅವರ ಮನೆಗೆ ತೆರಳಿದ ಸಿ.ಐ.ಡಿ ಅಧಿಕಾರಿಗಳ ತಂಡ ಮೊದಲು ಅವರನ್ನು ತಮ್ಮ ವಶಕ್ಕೆ ಪಡೆದಿದೆ. ಬಳಿಕ 30 ಮಂದಿ ಸಿಬ್ಬಂದಿ ತಲಾಷ್ ಮಾಡಿ ಅವರುಗಳನ್ನು ಸಹ ತಮ್ಮ ವಶಕ್ಕೆ ಪಡೆದಿದೆ.

ಪ್ರಕರಣದ ಹಿನ್ನೆಲೆ: ಸರ್ಕಾರದ ನಿಯಮಾನುಸಾರ ಯಾವುದೇ ಪುರಸಭಾ ವ್ಯಾಪ್ತಿಯಿಂದ ಮೂರು ಕಿ.ಮೀ. ವ್ಯಾಪ್ತಿ ಒಳಗೆ ಸರ್ಕಾರಿ ಜಮೀನನ್ನು ಯಾರಿಗೂ ಮಂಜೂರು ಮಾಡಲು ಅವಕಾಶವಿಲ್ಲ. ಆದರೆ ಕೆ.ಎಸ್. ಲಿಂಗೇಶ್ ಅವರು ಶಾಸಕರಾಗಿದ್ದ ಅವಧಿಯಲ್ಲಿ ಬೇಲೂರು ಪುರಸಭಾ ವ್ಯಾಪ್ತಿಯಿಂದ ಕೂಗಳತೆಯಲ್ಲಿರುವ ಮಾವಿನಕೆರೆ, ಬಂಟೇನಹಳ್ಳಿ, ಡಣಾಯಕನಹಳ್ಳಿ, ಮುದಿಗೆರೆ, ರಾಯಪುರ, ಸೇರಿದಂತೆ ಸುತ್ತಮುತ್ತಲಿನ ಮೌಲ್ಯಯುತ ಸರ್ಕಾರಿ ಭೂಮಿಯನ್ನು ಬಗರ್ ಹುಕುಂ ಅಡಿಯಲ್ಲಿ ಮಂಜೂರಾತಿ ಮಾಡಿ ಸಾಗುವಳಿ ಚೀಟಿ ನೀಡಿ ಖಾತೆ ಸೃಷ್ಟಿಸಲಾಗಿತ್ತು ಎನ್ನಲಾಗಿದೆ.

# ಮತದಾರ ಪಟ್ಟಿಯಿಂದ ಯಾರೂ ಹೊರಗುಳಿಯದಿರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್ ಐಆರ್) ಅರ್ಹ ಮತದಾರರಿಗೆ ಯಾವ ತೊಂದರೆಯನ್ನು ಮಾಡುವುದಿಲ್ಲ, ವಿರೋಧ ಪಕ್ಷಗಳ ಅಪಪ್ರಚಾರಕ್ಕೆ ಕಿವಿಗೊಡಬೇಡಿ. ಜೊತೆಗೆ ಪಕ್ಷದ ಕಾರ್ಯಕರ್ತರು ಮತದಾರರ ಪಟ್ಟಿಯಿಂದ ಅರ್ಹರು ಹೊರಗುಳಿಯದಂತೆ ಎಚ್ಚರ ವಹಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಶುಕ್ರವಾರ ತಾಲ್ಲೂಕು ಬಿಜೆಪಿ ಕಚೇರಿಯಲ್ಲಿ ಏರ್ಪಡಿಸಿದ್ದ ಎಸ್ಐಆರ್ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಮೂಲ ಆಧಾರವಾದ ಮತದಾನದ ಹಕ್ಕನ್ನು ಕಾಪಾಡುವುದು ಪ್ರತಿಯೊಬ್ಬ ಕಾರ್ಯಕರ್ತನ ಜವಾಬ್ದಾರಿಯಾಗಿದೆ ಎಂದು ಹೇಳಿದರು.



ಮತದಾರರ ಪಟ್ಟಿಯಲ್ಲಿ ಯಾವುದೇ ಅರ್ಹ ನಾಗರಿಕರ ಹೆಸರು ಕೈಬಿಡದಂತೆ ಎಚ್ಚರಿಕೆ ವಹಿಸಬೇಕು. ಪ್ರಕ್ರಿಯೆಯಲ್ಲಿ ಜನರಿಗೆ ಅಗತ್ಯ ಮಾಹಿತಿ ನೀಡಿ,

ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿಕೊಳ್ಳಲು ನೆರವಾಗಬೇಕು. ಬಿಜೆಪಿ ಕಾರ್ಯಕರ್ತರು ಮನೆ-ಮನೆಗೆ ಭೇಟಿ ನೀಡಿ ಮತದಾರರಲ್ಲಿ ಜಾಗೃತಿ ಮೂಡಿಸಬೇಕೆಂದು ಕರೆ ನೀಡಿದರು.

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಮತದಾರರ ಪಾತ್ರ ಮಹತ್ವದ್ದಾಗಿದೆ. ಮತದಾರರ ಪಟ್ಟಿಯಲ್ಲಿರುವ ದೋಷಗಳನ್ನು ಸರಿಪಡಿಸಿ ಹೊಸ ಮತದಾರರನ್ನು ಸೇರ್ಪಡೆಗೊಳಿಸುವ ಕಾರ್ಯದಲ್ಲಿ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದರು.

ಯುವ ಮತದಾರರು, ಮಹಿಳೆಯರು ಹಾಗೂ ಗ್ರಾಮೀಣ ಭಾಗದ ನಾಗರಿಕರಿಗೆ ಎಸ್ ಐಆರ್ ಕುರಿತು ಸಮಗ್ರ ಮಾಹಿತಿ ನೀಡುವ ಮೂಲಕ ಪ್ರತಿಯೊಬ್ಬ ಅರ್ಹ ವ್ಯಕ್ತಿಯೂ ಮತದಾರರ ಪಟ್ಟಿಯಲ್ಲಿ ಹೆಸರು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಬಿಜೆಪಿ ಕಾರ್ಯಕರ್ತರು ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಯಾವುದೇ ಗೊಂದಲಗಳಿಗೆ ಅವಕಾಶ ನೀಡದೆ ಮತದಾರರ ಹಕ್ಕುಗಳ ರಕ್ಷಣೆಗೆ ಮುಂದಾಗಬೇಕು. ಪಕ್ಷದ ಸಂಘಟನಾ ಶಕ್ತಿಯನ್ನು ಬಳಸಿಕೊಂಡು ಈ ಕಾರ್ಯವನ್ನು ಯಶಸ್ವಿಗೊಳಿಸೋಣ ಎಂದು ಸಿಮೆಂಟ್ ಮಂಜು ಕರೆ ನೀಡಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕ್ಯಾಮನಹಳ್ಳಿ ರಾಜ್‌ಕುಮಾರ್, ತಾಲ್ಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಅಗ್ನಿ ಸೋಮಶೇಖರ್, ಮಧು ಬೊಮ್ಮನಕೆರೆ, ನಿಕಟಪೂರ್ವ ಬಿಜೆಪಿ ತಾಲ್ಲೂಕು ಅಧ್ಯಕ್ಷ ರಾಮಚಂದ್ರ, ಮುಖಂಡರಾದ ಧರ್ಮಪ್ಪ, ಮಿಲಿಟರಿ ಚಂದ್ರಣ್ಣ, ಆನಂದ್ ಲಿಯೋ, ಸತ್ಯನಾರಾಯಣ ಗುಪ್ತ, ಮಹೇಶ್, ಪುರಸಭಾ ಮಾಜಿ ಸದಸ್ಯರಾದ ಮೋಹನ್, ವನಜಾಕ್ಷಿ, ರೇಖಾ ರುದ್ರಕುಮಾರ್, ಪ್ರದೀಪ್, ನವೀನ್ ಶೆಟ್ಟಿ ಮತ್ತಿತರರಿದ್ದರು.

# ಗ್ರಾಮೀಣ ಪ್ರದೇಶ ಅಭಿವೃದ್ಧಿಗೆ ರಸ್ತೆ ಸಂಪರ್ಕ ಅವಶ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಳ್ಳಿಯಿಂದ ಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಅಭಿವೃದ್ಧಿ ಹೊಂದಿದರೆ ಮಾತ್ರ ಗ್ರಾಮೀಣ ಪ್ರದೇಶ ಪ್ರಗತಿ ಕಾಣಲು ಸಾಧ್ಯ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ದೊಡ್ಡ ಕೆರೆಯ ಏರಿ ದುರಸ್ತಿ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ ತಾಲ್ಲೂಕಿಗೆ 400 ಕಿ.ಮೀ. ರಸ್ತೆ ಅಭಿವೃದ್ಧಿಗೆ ಅನುದಾನ ನೀಡಿದ್ದರು ಎಂದರು.

ಹಿರೀಸಾವೆ ದೊಡ್ಡ ಕೆರೆಯು ತುಂಬಿದರು ಸಹ ಈಗ ಯಾವುದೇ ಅಪಾಯ ಇಲ್ಲ. ದುರಸ್ತಿ ಕಾರ್ಯ ಒಂದು ತಿಂಗಳಲ್ಲಿ ಮುಗಿಯಲಿದೆ. ನಂತರ ಏರಿ ಪಕ್ಕದಲ್ಲಿ ಸಿಮೆಂಟ್ ತಡೆ



ಗೋಡೆ ಮತ್ತು ಕಾಲುವೆ ನಿರ್ಮಾಣ ಅತ್ಯಗತ್ಯ. ಈ ಬಗ್ಗೆ ಸಚಿವರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಮೂರು ವರ್ಷಗಳ ಹಿಂದೆ ಈ ಏರಿಯ ಮಣ್ಣು ಕುಸಿದಾಗ ತಾತ್ಕಾಲಿಕವಾಗಿ 100 ಮೀಟರ್ ಮರಳಿನ ಮೂಟೆ ಹಾಕಲಾಗಿತ್ತು. ನಂತರ ಸಣ್ಣ ನೀರಾವರಿ ಇಲಾಖೆಯಿಂದ ತಜ್ಞರ ತಂಡ ಬಂದು ಪರಿಶೀಲನೆ ನಡೆಸಿ, ಕಾಮಗಾರಿ ಮಾಡುವ ಬಗ್ಗೆ ಮಾರ್ಗದರ್ಶನ ನೀಡಿ, 300 ಮೀಟರ್ ರಿಪೇರಿ ಮಾಡಲು ಅನುಮತಿ ನೀಡಿತ್ತು. ಆದರೆ ಏರಿಯ ಬಹುಭಾಗದಲ್ಲಿ ಮಣ್ಣು ಕುಸಿದಿರುವುದರಿಂದ 800 ಮೀಟರ್ ದುರಸ್ತಿ ಮಾಡುವಂತೆ ಅಧಿಕಾರಿಗಳು ಮತ್ತು ಗುತ್ತಿ-ಗೆದಾರರಿಗೆ ಸೂಚಿಸಿದ್ದೆ, ಅದರಂತೆ ಕೆಲಸ ನಡೆಯುತ್ತಿದ್ದೆ ಎಂದರು.

ಈ ಬಗ್ಗೆ ಸಣ್ಣ ನೀರಾವರಿ ಅಧಿಕಾರಿಗಳು ಕಾಮಗಾರಿ ಪರಿಶೀಲಿಸಿ, ಅಗತ್ಯ ದಾಖಲೆಗಳನ್ನು ಸರ್ಕಾರಕ್ಕೆ ಒದಗಿಸಿ, ಹೆಚ್ಚಿನ ಅನುದಾನ ಬಿಡುಗಡೆ ಮಾಡಲು ಅಗತ್ಯ ಕ್ರಮಕೈಗೊಳ್ಳಬೇಕು ಎಂದ ಅವರು, ಗದ್ದೆಯೊಳಗೆ ಇರುವ ಅಮೃತೇಶ್ವರ ದೇವಸ್ಥಾನಕ್ಕೆ ಏರಿಯಿಂದ ಇಳಿಯಲು ದಾರಿ ಮಾಡಿಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕೆರೆ ತುಂಬಿ ಅಪಾಯದ ಅಂಚಿನಲ್ಲಿರುವ ವೇಳೆ ಅಧಿಕಾರಿಗಳ ಸೂಚನೆಯಂತೆ ಕೋಡಿ ಕೀಳಲಾಗಿದೆ. ಅದನ್ನು ಸರಿಪಡಿಸುವಂತೆ ಸ್ಥಳೀಯರು ಶಾಸಕರ ಗಮನಕ್ಕೆ ತಂದರು. ಅದನ್ನು ಮುಂದಿನ ದಿನಗಳಲ್ಲಿ ಸರಿಪಡಿಸುವುದಾಗಿ ಶಾಸಕರು ಭರವಸೆ ನೀಡಿದರು.

ಗುತ್ತಿಗೆದಾರ ಪೂಮಾಡಿಹಳ್ಳಿ ಬೋರೇಗೌಡ, ಮುಂಖಡರಾದ ರವಿಕುಮಾರ್, ವೆಂಕಟೇಶ್, ಮಂಜುನಾಥ್, ವಾಸಣ್ಣ, ಕೊತ್ತನಹಳ್ಳಿ ರವಿಕುಮಾರ್, ಸಬ್ಬನಹಳ್ಳಿ ದಿನೇಶ್, ವಾಸಣ್ಣ, ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಎಚ್.ಜಿ.ಬೋರೇಗೌಡ, ನಾಗೇಶ್, ನಿಖಿಲ್ ಹಾಗೂ ಇತರರು ಇದ್ದರು.

# ಸರ್ಕಾರಿ ಶಾಲೆಗಳಲ್ಲಿ ಹಾಜರಾತಿ ಹೆಚ್ಚಾಗಬೇಕು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಇನ್ನೂ ಹೆಚ್ಚಾಗಬೇಕು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಪಿಎಂಶ್ರೀ ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 17 ಲಕ್ಷ ರೂ. ವೆಚ್ಚದ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳು ಉಳಿಯಬೇಕು ಎಂದರು.

ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ, ಊಟದ ಜೊತೆಗೆ ಮೊಟ್ಟೆ ವಿತರಣೆ, ಸಮವಸ್ತ್ರ, ಶೂ ಹಾಗೂ ಪುಸ್ತಕ ಸೇರಿ ಉಚಿತ ಶಿಕ್ಷಣ ನೀಡುವ ಮೂಲಕ ಸರ್ಕಾರವು ಶೈಕ್ಷಣಿಕ ಪ್ರಗತಿಗೆ ಮುಂದಾಗಿದೆ. ಇದನ್ನು ಪಾಲಕರು ಮನಗಂಡು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವ ಮೂಲಕ ತಮ್ಮ ತಮ್ಮ ಗ್ರಾಮದಲ್ಲಿರುವ ಸರ್ಕಾರಿ ಶಾಲೆಗಳನ್ನು ಉಳಿಸುವಲ್ಲಿ ಮುಂದಾಗಬೇಕು ಎಂದು ಕರೆ ನೀಡಿದರು.

ಪಿಎಂ ಶ್ರೀ ಯೋಜನೆಯಡಿ 17 ಲಕ್ಷ ರೂ. ವೆಚ್ಚದಲ್ಲಿ ನೂತನ ಕಟ್ಟಡ ಹಾಗೂ 5 ಲಕ್ಷ ರೂ. ಗಳಲ್ಲಿ ಮೈದಾನದ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಕಳೆದ ಸಾಲಿನಲ್ಲಿ ಅಡುಗೆ ಕೊಠಡಿ ನಿರ್ಮಾಣ ಮಾಡಲಾಗಿತ್ತು. ಮುಂದಿನ ಸಾಲಿನಲ್ಲಿ ಹೆಚ್ಚುವರಿ ಅನುದಾನ ಕಲ್ಪಿಸಿ ಮತ್ತಷ್ಟು ಅಭಿವೃದ್ಧಿಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಚ್.ಜಿ.ರಾಮಕೃಷ್ಣ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಜೆ.ಮಹೇಶ್, ಮತಿಘಟ್ಟ ಸೊಸೈಟಿ ಮಾಜಿ ಅಧ್ಯಕ್ಷ ಎ.ಜಿ.ಪ್ರಭಾಕರ್, ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ ಮೌರ್ಯ, ಮುಖ್ಯಶಿಕ್ಷಕಿ ಹೆಚ್.ಬಿ.ಉಮಾ, ಶಿಕ್ಷಕರಾದ ಎಲ್.ಎಸ್.ಧರ್ಮೇಶ್, ಯೋಗೇಶ್, ಎಂ.ವಿನಯ ಇತರರಿದ್ದರು.

# ಕಾಂಗ್ರೆಸ್ ಗೆಲುವಿನ ಓಟ ಹೀಗೆ ಇರಲಿದೆ: ಸಂಸದ ಶ್ರೇಯಸ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಧಾನ ಪರಿಷತ್ ಚುನಾವಣೆಯಲ್ಲಿ ಗೆದ್ದಂತೆ ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಲಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅಭಿಪ್ರಾಯಪಟ್ಟರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಹುಟ್ಟುಹಬ್ಬದ ಅಂಗವಾಗಿ ನಗರದ ಹಿಮ್ಸ್‌ನಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮುಂದಾಲೋಚನೆ, ದೂರದೃಷ್ಟಿ ವಿಭಿನ್ನ ಮತ್ತು ವಿಶೇಷವಾಗಿದೆ. ರಾಜ್ಯದ ಜೊಡೆತ್ತುಗಳಾದ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಇದೇ ರೀತಿಯ ಗೆಲುವಿನ ಓಟ ಮುಂದುವರಿಯುತ್ತದೆ ಎಂದರು.


ರಾಜ್ಯ ಸರ್ಕಾರ ಎಷ್ಟು ಭದ್ರವಾಗಿದೆ ಎಂಬುದಕ್ಕೆ ಈ ಚುನಾವಣೆಯೇ ನಿದರ್ಶನ. ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನಡೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದ ಸಂಸದರು, ಅದು ಅವರ ವೈಯಕ್ತಿಕ. ನಾನು ಸಂಸದ, ಅಲ್ಲಿ ಚುನಾವಣೆ ನಡೆಯುವಾಗ ನಾನು ಕ್ಷೇತ್ರದಲ್ಲಿದ್ದೆ. ಅದರ ಬಗ್ಗೆ ಅಷ್ಟು ಮಾಹಿತಿ ಇಲ್ಲವೆಂದು ಸ್ಪಷ್ಟಪಡಿಸಿದರು.



ಒಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ, ಆಡಳಿತ ವೈಖರಿಯನ್ನು ಮೆಚ್ಚಿ ಬೇರೆ ಪಕ್ಷದ ಶಾಸಕರು ಮತ ಹಾಕಿದ್ದಾರೆ. ನಮ್ಮ ಮುಖ್ಯಮಂತ್ರಿ ಕನಕಪುರದ ಬಂಡೆ, ಅವರ ಗಟ್ಟಿತನ ಹಾಗೂ ಶ್ರಮದಿಂದಾಗಿ 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಇಲ್ಲಿಯವರೆಗೂ ಸಿದ್ದರಾಮಯ್ಯ ಅವರು ಸದೃಢ ಆಡಳಿತ ಕೊಟ್ಟರು. ಈಗ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಜವಾಬ್ದಾರಿ ವಹಿಸಿಕೊಂಡಿದ್ದು, ಪರಿಷತ್ ಚುನಾವಣೆ ಅವರಿಗೆ ಮೊದಲ ಪರೀಕ್ಷೆಯಾಗಿತ್ತು. ಅದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅವರ ಆಡಳಿತವನ್ನು ಮೆಚ್ಚಿ ಶಾಸಕರು ಮತ ಹಾಕಿದ್ದಾರೆಂದರು.

ಕಾಂಗ್ರೆಸ್ ಮುಖಂಡರಾದ ಬನವಾಸೆ ರಂಗಸ್ವಾಮಿ, ಬಾಗೂರು ಮಂಜೇಗೌಡ, ಪ್ರಚಾರ ಸಮಿತಿ ಅಧ್ಯಕ್ಷ ಮಂಜುನಾಥ್ ಶರ್ಮಾ ಇತರರಿದ್ದರು

# ಆತ್ಮಸಾಕ್ಷಿ ಮತಗಳಿಂದ ಗೆದ್ದಿದ್ದೇವೆ: ಹೆಚ್.ಎಂ.ರೇವಣ್ಣ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರತಿಯೊಬ್ಬ ಶಾಸಕರು ಆತ್ಮಸಾಕ್ಷಿಯಾಗಿ ಮತ ನೀಡಿದ್ದರಿಂದಲೇ ಕಾಂಗ್ರೆಸ್‌ನ ಐದು ಅಭ್ಯರ್ಥಿಗಳು ವಿಧಾನ ಪರಿಷತ್ ಚುನಾವಣೆಯಲ್ಲಿ ಗೆದ್ದಿದ್ದಾರೆ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ನಾವು ಯಾರಿಗೂ ಆಮೀಷವೊಡ್ಡಿ ಗೆದ್ದಿಲ್ಲ. ನಾವು ಐದು ಅಭ್ಯರ್ಥಿಗಳನ್ನು ಹಾಕಿದ್ದೇವು. ಐದು ಅಭ್ಯರ್ಥಿಗಳಿಗೂ ವಿಧಾನಸಭಾ ಸದಸ್ಯರು ಮತ ಹಾಕಿದ್ದಾರೆ. ಇದರ ಅರ್ಥ ನಮ್ಮ ಸರ್ಕಾರ ಉತ್ತಮವಾಗಿ ನಡೆಯುತ್ತಿದೆ ಎಂಬುದು. ಡಿ.ಕೆ.ಶಿವಕುಮಾರ್ ಅವರ ನಾಯಕತ್ವದಲ್ಲಿ ಮೊದಲನೇ ಚುನಾವಣೆಯನ್ನು ಗೆದ್ದಿದ್ದೇವೆ. 2028ರ ಚುನಾವಣೆಯಲ್ಲೂ ಗೆಲ್ಲುತ್ತೇವೆಂದು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರದಲ್ಲಿ ಅಧಿಕಾರ ತಾತ್ಕಾಲಿಕ, ರಾಜ್ಯವೇ ಶಾಶ್ವತ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ಪಾಪ ಕುಮಾರಸ್ವಾಮಿ ಅವರಿಗೆ ಯಾವಾಗ ಏನೇನು ಜ್ಞಾಪಕ ಬರುತ್ತದೆ ಅದುನ್ನ ಹೇಳುತ್ತಾರೆ. ಅವರು ಒಂದು ರೀತಿ ಹಾವಾಡಿಗರಿದ್ದಂತೆ. ಬುಟ್ಟಿಯಿಂದ ಬಿಡುತ್ತೇನೆ, ಬಿಡುತ್ತೇನೆ ಎಂದು ಹಾವು ಬಿಡುವುದಿಲ್ಲ. ಇಲ್ಲಿಯವರೆಗೂ ಅವರು ನೀಡಿರುವ ಹೇಳಿಕೆಗಳನ್ನು ನೋಡಿದರೆ ಒಂದರಲ್ಲಾದರೂ ಸಾರಾಂಶ ಇದೆಯಾ ಎಂದು ಲೇವಡಿ ಮಾಡಿದರು.

ನಮ್ಮನ್ನು ಬಹಳ ಟೀಕೆ ಮಾಡುವ ಬಿಜೆಪಿಯವರು, ಬಸನಗೌಡ ಪಾಟೀಲ್ ಯತ್ನಾಳ್ ಅವರ ಆರೋಪಗಳಿಗೆ ಉತ್ತರ ಕೊಟ್ಟರೆ ಸಾಕು. ಅವರಲ್ಲೇ ಉತ್ತರಗಳಿಲ್ಲದೆ ನಮ್ಮನ್ನು ಟೀಕೆ ಮಾಡುತ್ತಾರೆ. ನಮ್ಮ ಸರ್ಕಾರ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದು ಇರತೆ ಪಕ್ಷದ ಶಾಸಕರು ಮತ ಹಾಕಿದ್ದಾರೆ. ನಾವು ಸ್ವಾಗತ ಮಾಡುತ್ತೇವೆ. ಇದರಲ್ಲಿ ತೆರೆಮರೆ ಯಾವುದು ಇಲ್ಲ ಎಂದರು.

# ಎಸ್ಐಆರ್ ಜವಾಬ್ದಾರಿಯಿಂದ ನಿರ್ವಹಿಸಿ: ಜಿಲ್ಲಾಧಿಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬೇಲೂರಿನ ವೀರಶೈವ ಸಮುದಾಯ ಭವನದಲ್ಲಿ ಚುನಾಯಿತ ಪ್ರತಿನಿಧಿಗಳು, ಮತಗಟ್ಟೆ ಅಧಿಕಾರಿಗಳು ಮತ್ತು ಮೇಲ್ವಿಚಾರಕರು, ಮತಗಟ್ಟೆ ಏಜೆಂಟರು, ಮಾಸ್ಟರ್ ಟ್ರೈನರ್ ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಅರ್ಹ ಮತದಾರರ ಹೆಸರು ಸೇರ್ಪಡೆ, ಮೃತರಾದವರ ಅಥವಾ ಸ್ಥಳಾಂತರಗೊಂಡವರ ಹೆಸರು ತೆಗೆದು ಹಾಕುವಿಕೆ ಹಾಗೂ ತಿದ್ದುಪಡಿಗಳನ್ನು ನಿಖರವಾಗಿ ಕೈಗೊಳ್ಳಬೇಕು. ಯಾವುದೇ ಅರ್ಹ ಮತದಾರ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಕ್ರಮ ವಹಿಸುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಬೇಜವಾಬ್ದಾರಿತನ ತೋರದೆ ಪ್ರತಿಯೊಬ್ಬ ಅಧಿಕಾರಿಯೂ ತನ್ನ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಬೇಕು. ಕರ್ತವ್ಯ ಲೋಪ ಅಥವಾ ನಿರ್ಲಕ್ಷ್ಯ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿ ಸೂಪರ್‌ವೈಸರ್ ಅಡಿಯಲ್ಲಿ 8 ರಿಂದ 10 ಬಿಎಲ್ಒಗಳು ಕಾರ್ಯನಿರ್ವಹಿಸುತ್ತಿದ್ದು, ತಮ್ಮ ವ್ಯಾಪ್ತಿಯ ಎಲ್ಲಾ ಬಿಎಲ್ಒಗಳ ಸಂಪೂರ್ಣ ವಿವರಗಳನ್ನು ಹೊಂದಿರಬೇಕು.

ಜೊತೆಗೆ ಅವರ ಕಾರ್ಯಚಟುವಟಿಕೆಗಳ ಮೇಲೆ ನಿರಂತರ ನಿಗಾವಹಿಸಿ ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದರು.

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಭಾರತೀಯ ಪ್ರಜೆಯಾಗಿದ್ದು, ಕನಿಷ್ಠ 18 ವರ್ಷ ವಯಸ್ಸು ಪೂರ್ಣಗೊಂಡಿರಬೇಕು. ಬಿಎಲ್ಒಗಳು ಪ್ರತಿಯೊಂದು ಮನೆ-ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂಗಳನ್ನು ವಿತರಿಸಬೇಕು, ನಮೂನೆಯಲ್ಲಿ ಮತದಾರರ ಇತ್ತೀಚಿನ ಭಾವಚಿತ್ರವನ್ನು ಅಂಟಿಸಿರಬೇಕು ಜೊತೆಗೆ ಭರ್ತಿ ಮಾಡಿದ ಫಾರಂಗಳ ಮೇಲೆ ಮತದಾರರ ಸಹಿ ಅಥವಾ ಹೆಬ್ಬೆರಳ ಗುರುತು ಕಡ್ಡಾಯವಾಗಿರಬೇಕು ಎಂದು ತಿಳಿಸಿದರು.

ಆಧಾರ್ ಕಾರ್ಡ್ ಸೇರಿ 12 ಅಧಿಕೃತ ದಾಖಲೆಗಳನ್ನು ಗುರುತಿನ ದೃಢೀಕರಣಕ್ಕಾಗಿ ಬಳಸಬಹುದಾದರೂ, ಆಧಾರ್ ಕಾರ್ಡ್ ಪೌರತ್ವದ ಪುರಾವೆಯಲ್ಲ ಎಂಬುದನ್ನು ಅಧಿಕಾರಿಗಳು ಗಮನದಲ್ಲಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಮೊಬೈಲ್ ಆಪ್ ಮೂಲಕ ಮತದಾರರ ಭರ್ತಿ ಮಾಡಿ ನೀಡಿದ ನಮೂನೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಕೌಶಲ್ಯವನ್ನು ಅಧಿಕಾರಿಗಳು ಬೆಳೆಸಿಕೊಳ್ಳಬೇಕು ಎಂದರಲ್ಲದೆ, ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತರು, ಕ್ರೀಡಾಪಟುಗಳು, ಸಿನಿಮಾ ಕ್ಷೇತ್ರದ ಗಣ್ಯರು ಹಾಗೂ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಸೇರಿ ಮತಗಟ್ಟೆ ವ್ಯಾಪ್ತಿಯ ಎಲ್ಲಾ ಪ್ರಮುಖ ವ್ಯಕ್ತಿಗಳ ಹೆಸರುಗಳು ಮತದಾರರ ಪಟ್ಟಿಯಲ್ಲಿ ಇರುವುದನ್ನು ಬಿಎಲ್ಒಗಳು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ಇತರರಿದ್ದರು.

# ಅಗ್ನಿಶಾಮಕ ವಾಹನ ತಡವಾಗಿ ಆಗಮನ ಆರೋಪ: ಆಕ್ರೋಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಳೇಬೀಡು: ಪಟ್ಟಣದ ವ್ಯಾಪಾರಿ ಕಾಂತರಾಜು ಅವರಿಗೆ ಸೇರಿದ ಎಲೆಕ್ಟ್ರಿಕ್ ಮತ್ತು ಹಾರ್ಡ್‌ವೇರ್ ಗೋಡಾವನ್‌ನಲ್ಲಿ ಬುಧವಾರ ರಾತ್ರಿ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಲಕ್ಷಾಂತರ ರೂ. ಮೌಲ್ಯದ ಎಲೆಕ್ಟ್ರಿಕ್ ಉಪಕರಣಗಳು ಹಾಗೂ ವಿವಿಧ ಸಾಮಗ್ರಿಗಳು ಸುಟ್ಟು ಭಸ್ಮವಾಗಿವೆ.

ಗೋಡಾವನ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ವಿದ್ಯುತ್ ಸರಬರಾಜಿನಲ್ಲಿ ಉಂಟಾದ ದೋಷ ಅಥವಾ ಹೆಚ್ಚಿನ ವೋಲ್ಟೇಜ್‌ನಿಂದ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಬೆಂಕಿ ಹೊತ್ತಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಈ ಬಗ್ಗೆ ವಿದ್ಯುತ್ ಇಲಾಖೆಯ ನಿರ್ಲಕ್ಷ್ಯದ ಕುರಿತು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಕಿ ಕಾಣಿಸಿಕೊಂಡ ಕೂಡಲೇ ಸ್ಥಳೀಯರು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದರೂ ಅಗ್ನಿಶಾಮಕ ವಾಹನ ಹಾಗೂ ಸಿಬ್ಬಂದಿ ಸ್ಥಳಕ್ಕೆ ತಡವಾಗಿ ಆಗಮಿಸಿದರು ಎಂಬ ಆರೋಪ ಕೇಳಿಬಂದಿದೆ. ವಾಹನ ಸಮಯಕ್ಕೆ ಬಂದಿದ್ದರೆ ಹೆಚ್ಚಿನ ಪ್ರಮಾಣದ ನಷ್ಟವನ್ನು ತಪ್ಪಿಸಬಹುದಿತ್ತು ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೆಂಕಿಯ ಕೆನ್ನಾಲಿಗೆ ಗೋಡಾವನ್‌ನ ಮೇಲ್ಭಾಗಕ್ಕೂ ವ್ಯಾಪಿಸಿದ್ದರಿಂದ ಕೆಲ ಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಸ್ಥಳೀಯರು ಹಾಗೂ ವ್ಯಾಪಾರಿಗಳು ಧೈರ್ಯದಿಂದ ಕಾರ್ಯನಿರ್ವಹಿಸಿ ಬೆಂಕಿ ಮತ್ತಷ್ಟು ವ್ಯಾಪಿಸದಂತೆ ತಡೆಗಟ್ಟುವಲ್ಲಿ ಸಹಕರಿಸಿದರು.

ಘಟನಾ ಸ್ಥಳಕ್ಕೆ ಹಳೇಬೀಡು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಗ್ನಿ ಅವಘಡದ ನಿಖರ ಕಾರಣ ಹಾಗೂ ಸಂಭವಿಸಿದ ನಷ್ಟದ ಪ್ರಮಾಣದ ಕುರಿತು ತನಿಖೆ ಆರಂಭಿಸಿದ್ದಾರೆ.

# ಇಂದಿನಿಂದ 2 ದಿನಗಳ ಗೋಕುಲೋತ್ಸವ ನಾಟಕ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಬಾಲ ರಂಗ ಕಲಾವಿದ ಗೋಕುಲ ಸಹೃದಯ ಅಭಿನಯದ ಏಕವ್ಯಕ್ತಿ ನಾಟಕಗಳ 2 ದಿನಗಳ ಉತ್ಸವ ಜೂ.20 ಮತ್ತು 21 ರಂದು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆಯಲಿದೆ ಎಂದು ರಂಗಕರ್ಮಿ ಚಲಂ ಹಾಡ್ಲಹಳ್ಳಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ರಂಗಭೂಮಿಯಲ್ಲಿ ಏಕವ್ಯಕ್ತಿ ಅಭಿನಯದ ರಂಗ ಪ್ರಯೋಗಗಳನ್ನು ಮಾಡಿದ ಮೊದಲ ಕನ್ನಡದ ಬಾಲರಂಗ ಕಲಾವಿದ ಜಿಲ್ಲೆಯ ಶಿಲ್ಪಕಲೆಗಳ ನೆಲೆವೀಡು ಬೇಲೂರಿನವರಾಗಿದ್ದಾರೆ. ಅವರಿಗೆ ತವರು ಜಿಲ್ಲೆಯ ಗೌರವ ಹಿನ್ನೆಲೆಯಲ್ಲಿ ಬೇಲೂರು ಗೋಕುಲೋತ್ಸವ ಹೆಸರಿನಲ್ಲಿ ನಾಟಕೋತ್ಸವ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಗೋಕುಲ ಸಹೃದಯ ಅಭಿನಯದ ಡಾ.ಬೇಲೂರು ರಘುನಂದನ್ ನಿರ್ದೇಶನದ, ಕೃಷ್ಣಮೂರ್ತಿ ಕವತ್ತಾರ್ ವಿನ್ಯಾಸ ಮಾಡಿ, ಸಂಗೀತ ನೀಡಿ, ನಿರ್ದೇಶನ ಮಾಡಿರುವ ಚಿಟ್ಟೆ ನಾಟಕ, ದೇಶಾದ್ಯಂತ 137 ರಂಗ ಪ್ರಯೋಗಗಳನ್ನು 10ಕ್ಕೂ ರಾಜ್ಯಗಳಲ್ಲಿ ಪ್ರದರ್ಶನಗೊಂಡಿರುವ ನಾಟಕವಾಗಿದೆ. ಹಾಗೆಯೇ ಎಸ್.ಎಲ್.ಎನ್. ಸ್ವಾಮಿ ಅವರು ರಚಿಸಿ, ಸಂಗೀತ ನೀಡಿ, ನಿರ್ದೇಶನ ಮಾಡಿರುವ ಪಂಚಗವ್ಯ ಪೌರಾಣಿಕ ನಾಟಕ, ಪ್ರಪಂಚದಲ್ಲಿ ಪ್ರಯೋಗಗೊಂಡ ಮೊದಲ ಏಕ ಬಾಲಕ ಪೌರಾಣಿಕ ರಂಗಪ್ರಯೋಗ ಎಂದು ವಿವರಿಸಿದರು.

2 ದಿನಗಳ ನಾಟಕೋತ್ಸವಕ್ಕೆ ನಗರದ ವಿಜಯ ಶಾಲೆ ಸಹಕಾರ ನೀಡಿದ್ದು, ಎರಡೂ ದಿನ ಸಂಜೆ 7 ಗಂಟೆಗೆ ನಾಟಕ ಪ್ರದರ್ಶನ ಆರಂಭವಾಗಲಿದ್ದು, ಎಲ್ಲರೂ ಆಗಮಿಸಿ ನಾಟಕ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಬಾಲ ಕಲಾವಿದ ಗೋಕುಲ ಸಹೃದಯ ಹಾಲಿ 10ನೇ ತರಗತಿ ಓದುದ್ದಿತ್ತು, ಚಿತ್ರಕಲೆ, ಸಂಗೀತ, ರಂಗಕಲೆಯ ಬಗ್ಗೆ ಅಗಾಧ ಆಸಕ್ತಿ ಹೊಂದಿದ್ದಾರೆ.

ತನ್ನ ನಾಲ್ಕನೇ ವಯಸ್ಸಿನಿಂದಲೂ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಲು ಆರಂಭಿಸಿದ ಬಾಲ ರಂಗಕಲಾವಿದ, ಸಾಲುಮರಗಳ ತಾಯಿ ತಿಮ್ಮಕ್ಕ, ರೂಬಿಕ್ಸ್ ಕ್ಯೂಬ್, ಅಣ್ಣನ ನೆನಪು, ಅರೇಬಿಯನ್ ನೈಟ್ ಎಂಬ ನಾಟಕ ಸೇರಿ ಹತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಬೇರೆ ಬೇರೆ ರಂಗತಂಡ ಮತ್ತು ನಿರ್ದೇಶಕರ ಅಡಿಯಲ್ಲಿ ನಾಟಕ ಪ್ರದರ್ಶನಮಾಡಿ ಸೈ ಎನಿಸಿಕೊಂಡಿದ್ದಾನೆ ಎಂದರು.

ಕೆಯೂಡಬ್ಲ್ಯೂಜೆ ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು ಮಾತನಾಡಿ, ವಿಶೇಷವಾದ ನಾಟಕಕ್ಕೆ ಎಲ್ಲರೂ ಪ್ರೋತ್ಸಾಹ ನೀಡುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿಗಳಾದ ರಂಗರಾಜು ಹಲಿವಾಲ ಉಲಿವಾಲ ಮೋಹನ್ ಕುಮಾರ್, ಪೂಜಾ ರಘುನಂದನ್ ಇದ್ದರು.

# ವ್ಯಸನ ಮುಕ್ತ ಸಂಕಲ್ಪದಿಂದ ದೇಶದ ಬದಲಾವಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಸಮಾಜ, ಕುಟುಂಬ ಮತ್ತು ಸ್ನೇಹಿತರನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸುವ ಸಂಕಲ್ಪದೊಂದಿಗೆ ದೇಶದ ಬದಲಾವಣೆ ನಮ್ಮಿಂದಲೇ ಆರಂಭವಾಗಬೇಕೆಂದು ಗ್ರಾಮೀಣ ಪುನರ್ವಸತಿ ಕಾರ್ಯಕರ್ತ ಮಧುಕುಮಾರ್ ಹೇಳಿದರು.

ಕೇಂದ್ರ ಸರ್ಕಾರದ ನಶಾಮುಕ್ತ ಭಾರತ ಅಭಿಯಾನ ಯೋಜನೆಯಡಿ ಹಮ್ಮಿಕೊಂಡಿರುವ ನಶಾಮುಕ್ತ ಭಾರತ ಅಭಿಯಾನ ಸಪ್ತಾಹ ಕಾರ್ಯಕ್ರಮಕ್ಕೆ ಪಟ್ಟಣದ ಅನುಗ್ರಹ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಯುವಕರು ರಾಷ್ಟ್ರದ ಶಕ್ತಿಯಾಗಿದ್ದು, ಸಮಾಜ ಹಾಗೂ ದೇಶದ ಅಭಿವೃದ್ಧಿಯಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ಆದ್ದರಿಂದ ದುಶ್ಚಟಗಳಿಂದ ದೂರ ಇರುವಂತೆ ತಿಳಿಸಿದರು.

ರಾಜ್ಯ ಸರ್ಕಾರದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶನದ ಮೇರೆಗೆ ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಅಭಿಯಾನವನ್ನು ನಡೆಸಲಾಗುತ್ತಿದೆ. ಅದರ ಅಂಗವಾಗಿ ಶಾಲೆಯಲ್ಲಿ ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಕುರಿತು ರಂಗೋಲಿ, ಚಿತ್ರಕಲೆ ಸೇರಿ ವಿವಿಧ ಸ್ಪರ್ಧೆ ಆಯೋಜಿಸಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲಾಯಿತು. ಮುಂದಿನ ದಿನಗಳಲ್ಲಿ ಹೋಬಳಿ ವ್ಯಾಪ್ತಿಯ ಎಲ್ಲಾ ಶಾಲೆ ಮತ್ತು ಕಾಲೇಜುಗಳಲ್ಲಿ ಇದೇ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಶಾಲೆಯ ಮುಖ್ಯೋಪಾಧ್ಯಾಯೆ ಪ್ರಸಿಲ್ಲಾ ಡಿಸೋಜ ಮಾತನಾಡಿ, ಗ್ರಾಮೀಣ ಭಾಗಗಳಲ್ಲಿ ಬಡತನದ ಜೊತೆಗೆ ಮದ್ಯಪಾನ ವ್ಯಸನವೂ ಹೆಚ್ಚಾಗಿ ಕಂಡುಬರುತ್ತಿದೆ. ಮದ್ಯಪಾನದಿಂದ ಕುಟುಂಬದ ಶಾಂತಿ ಹಾಳಾಗುವುದರ ಜೊತೆಗೆ ಮಕ್ಕಳ ವಿದ್ಯಾಭ್ಯಾಸ ಮತ್ತು ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತದೆ. ಕೆಲ ಯುವಕರು ಕ್ಷಣಿಕ ಸಂತೋಷ ಮತ್ತು ಕೆಲಸಗಳು ಬೇಗ ಆಗಬೇಕು ಎಂಬ ಭ್ರಮೆಯಿಂದ ಮಾದಕ ವಸ್ತುಗಳತ್ತ ಆಕರ್ಷಿತರಾಗುತ್ತಿದ್ದಾರೆ. ಅದರಿಂದ ಅವರ ಆರೋಗ್ಯ ಮಾತ್ರವಲ್ಲದೆ ಕುಟುಂಬದ ನೆಮ್ಮದಿಯೂ ಹಾಳಾಗುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಹೊಂದಿ, ತಮ್ಮ ನೆರೆಹೊರೆಯವರಲ್ಲೂ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಅವರು ಕರೆ ನೀಡಿದರು. ತುಂಬದೇವನಹಳ್ಳಿ ಗ್ರಾಮ ಪಂಚಾಯಿತಿಯ ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆ ಶಿಲ್ಪ, ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜೂ. 27ರಂದು ಕೆಂಪೇಗೌಡ ಜಯಂತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಜೂ. 27ರಂದು ಪಟ್ಟಣದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ತಾಲೂಕು ಕಚೇರಿಯಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಗುರುವಾರ ತಾಲ್ಲೂಕಿನ ಸಂಘ ಸಂಸ್ಥೆಗಳು, ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಲಾಯಿತು.

ತಾಲ್ಲೂಕು ಕಚೇರಿ ಆವರಣದಲ್ಲಿ ಈ ಬಾರಿ ಸರಳವಾಗಿ ಕೆಂಪೇಗೌಡರ ಜಯಂತಿ ಜರುಗಲಿದ್ದು, ಸರ್ಕಾರಿ ನೌಕರರು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶಾಸಕ ಸಿ.ಎನ್ .ಬಾಲಕೃಷ್ಣ ಕೋರಿದರು.

ಬೆಳಿಗ್ಗೆ ತಿಂಡಿ, ಸಿಹಿ ಹಂಚಿಕೆ ಮಾಡಲಾಗುವುದು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 10 ಮಂದಿಗೆ ಸನ್ಮಾನಕ್ಕೆ ತೀರ್ಮಾನ ಮಾಡಲಾಗಿದೆ. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿ ಇಲಾಖೆಯ ಅಧಿಕಾರಿಗಳು ಹಾಜರಿರಬೇಕು. ಎಲ್ಲರೂ ಒಟ್ಟಾಗಿ ಸೇರಿ ಮಹಾನ್ ನಾಯಕನಿಗೆ ಗೌರವ ಸಲ್ಲಿಸುವಂತಾಗಬೇಕು ಎಂದರು.

ತಹಶೀಲ್ದಾರ್ ಜಿ.ಎಸ್.ಶಂಕರಪ್ಪ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಹರೀಶ್, ಪುರಸಭೆ ಮುಖ್ಯಾಧಿಕಾರಿ ಆರ್.ಯತೀಶ್‌ಕುಮಾರ್, ಕೆಂಪೇಗೌಡ ವೇದಿಕೆ ಸ್ಥಾಪಕ ಅಧ್ಯಕ್ಷ ಆನಂದ್ ಕಾಳೇನಹಳ್ಳಿ, ಒಕ್ಕಲಿಗರ ಸಂಘದ ಅಧ್ಯಕ್ಷ ಜಯಪಾಲ್, ಮಕ್ಕಳ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸಿ.ಎನ್.ಅಶೋಕ್, ಮನೋಹರ್, ಮಹದೇವ್ ಮತ್ತಿತರರಿದ್ದರು.

# ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಪೋಷಕರ ಜವಾಬ್ದಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕೊಡಿಸುವುದು ಪೋಷಕರ ಜವಾಬ್ದಾರಿ ಮಾತ್ರ ಅಲ್ಲ ಸಮಾಜದ್ದು ಆಗಿದೆ ಎಂದು ತಾಲೂಕು ಕರವೇ ಉಪಾಧ್ಯಕ್ಷ ಮುದುಡಿ ಗಂಗಾಧರ್ ನಾಯ್ಕ್ ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ತಾಲೂಕಿನ ಮುದುಡಿ ಬಿ.ತಾಂಡ್ಯ ಹಾಗೂ ಬಸವನಪುರ ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್ ಬುಕ್ ಮತ್ತು ಶಿಕ್ಷಣಕ್ಕೆ ಬೇಕಾದ ಇತರೆ ಪರಿಕರಗಳನ್ನು ವಿತರಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲೂ ಸಹ ಪ್ರತಿಭಾವಂತ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು ಅಂತಹ ವಿದ್ಯಾರ್ಥಿಗಳಿಗೆ ಪೋಷಕರ ಜತೆಗೆ ಸಮಾಜ ಕೂಡ ಶಿಕ್ಷಣಕ್ಕೆ ಪೂರಕವಾದ ಸವಲತ್ತುಗಳನ್ನು ಪೂರೈಸಿದೆ. ಆದರೆ ಪ್ರತಿಯೊಂದು ಮಗುವು ಕೂಡ ಸಮಾಜದ ಆಸ್ತಿಯಾಗುವುದರಲ್ಲಿ ಸಂದೇಹವಿಲ್ಲ ಎಂದು ಕರೆ ನೀಡಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ಅಧ್ಯಕ್ಷ ಶಿವಪ್ಪ ಮಾತನಾಡಿ, ಕನ್ನಡಿಗರ ಧ್ವನಿಯಾಗಿರುವ ಕರ್ನಾಟಕ ರಕ್ಷಣಾ ವೇದಿಕೆ ನಾಡು ನುಡಿ ನೆಲ ಜಲದ ರಕ್ಷಣೆಗೆ ಹೋರಾಟ ಮಾಡುವುದರ ಜತೆಗೆ ಶೈಕ್ಷಣಿಕ, ಸಾಮಾಜಿಕ ಆರೋಗ್ಯ ಹಾಗೂ ಪರಿಸರ ಸೇರಿ ಇತರ ಕ್ಷೇತ್ರಗಳಲ್ಲೂ ಸಮಾಜಮುಖಿ ಸೇವೆ ಮಾಡುವ ಮೂಲಕ ಇತರ ಸಂಘಟನೆಗಳಿಗೂ ಆದರ್ಶವಾಗಿರುವುದು ಸಂತಸದ ವಿಷಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮುಖಂಡರಾದ ಬೋರೇಹಳ್ಳಿ ಸೋಮಶೇಖರ್, ತಾಲೂಕು ಬಂಜಾರ ಸಮಾಜದ ಅಧ್ಯಕ್ಷ ಮಂಜುನಾಥ್, ಕರವೇ ಮಹಿಳಾ ಘಟಕ ಅಧ್ಯಕ್ಷೆ ಕಮಲಮ್ಮ, ಹೋಬಳಿ ಮುಖಂಡರು ಗಂಗಾಧರ್, ಶಿವಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಂಗಸ್ವಾಮಿ, ಅಂಗಡಿ ಶಿವಕುಮಾರ್ ನಾಯಕ್ ಪೊಲೀಸ್ ಇಲಾಖೆ ಮಣಿ, ಗಂಗಾನಾಯ್ಕ, ಜಯ ನಾಯ್ಕ, ಗುಂಡ ನಾಯ್ಕ, ಕರವೇ ಮುಖಂಡರಾದ ಸಂದೀಪ್ ಇತರರಿದ್ದರು.

# ವ್ಯಸನ ಮುಕ್ತ ಸಮಾಜ ನಿರ್ಮಿಸೋಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಮಾದಕ ವ್ಯಸನವನ್ನು ತ್ಯಜಿಸಿ ಕುಟುಂಬದ ಹಾಗೂ ಸಮಾಜದ ಕಾಪಾಡೋಣ ಎಂದು ಭುವನೇಶ್ವರಿ ಮದ್ಯಪಾನ ವ್ಯಸನ ಮುಕ್ತ ಕೇಂದ್ರದ ವ್ಯವಸ್ಥಾಪಕಿ ಅಂಜಲಿ ದೇವಿ ಹೇಳಿದರು.

ನಗರದ ಗುಡ್ ಸಿಟಿಜನ್ ಕಾಲೇಜಿನಲ್ಲಿ ಭುವನೇಶ್ವರಿ ಮದ್ಯಪಾನ ವ್ಯಸನ ಮುಕ್ತ ಕೇಂದ್ರದಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾವು ಮಾದಕ ವ್ಯಸನವನ್ನು ತ್ಯಜಿಸಿ ಕುಟುಂಬದ ಹಾಗೂ ಸಮಾಜದ ಸ್ವಾಸ್ಥ್ಯ ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಮಾಜದಲ್ಲಿ ಅರಿವು ಮೂಡಿಸುವುದರ ಜೊತೆಗೆ ಮಾದರಿಯಾಗಿ ಇರಬೇಕು ಎಂದು ತಿಳಿಸಿದರು.

ಅಧ್ಯಕ್ಷತೆಯನ್ನು ಗುಡ್ ಸಿಟಿಜನ್ ಕಾಲೇಜಿನ ಪ್ರಾಂಶುಪಾಲ ಡಾ. ಎಚ್. ಎಂ. ಹೇಮಂತ್ ಕುಮಾರ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಭುವನೇಶ್ವರಿ ಮದ್ಯಪಾನ ವ್ಯಸನ ಮುಕ್ತ ಕೇಂದ್ರದ ಡಾ. ಪವನ್ ಜೋಶಿ, ಡಾ. ವಿಶ್ವಾಸ್, ರಾಘವೇಂದ್ರ ಹಾಗೂ ಉಪನ್ಯಾಸಕ ಶ್ರೀನಿವಾಸ್, ಸಂಜಯ್ ಕುಮಾರ್ ಉಪಸ್ಥಿತರಿದ್ದರು.

# ಇತಿಹಾಸದಲ್ಲಿ ಈ ದಿನ

## ಜೂನ್-20

1837: ಬ್ರಿಟನ್‌ನ ರಾಜ ನಾಲ್ಕನೇ ವಿಲಿಯಂ ನಿಧನದ ಬಳಿಕ ವಿಕ್ಟೋರಿಯಾ ರಾಣಿ ಬ್ರಿಟನ್‌ನ ರಾಣಿಯಾಗಿ ಅಧಿಕಾರ ವಹಿಸಿಕೊಂಡರು.

1960: ಮಾಲಿ ಒಕ್ಕೂಟ ಸ್ವಾತಂತ್ರ್ಯ ಪಡೆದಿತು.

1975: ವಿಶ್ವಪ್ರಸಿದ್ಧ ಜಾಸ್ ಚಲನಚಿತ್ರ ಅಮೆರಿಕದಲ್ಲಿ ಬಿಡುಗಡೆಯಾಯಿತು.

1990: ಮಂಗಳ ಗ್ರಹದ ಮೊದಲ ಟ್ರೋಜನ್ ಕ್ಷುದ್ರಗ್ರಹ ಯುರೇಕಾ ಪತ್ತೆಯಾಯಿತು.

**ಜನನ**

1923: ವಿ.ಕೆ. ಮೂರ್ತಿ, ಖ್ಯಾತ ಭಾರತೀಯ ಛಾಯಾಗ್ರಾಹಕ

1949: ಲಯನಲ್ ರಿಚಿ, ಅಮೆರಿಕದ ಖ್ಯಾತ ಗಾಯಕ

**ನಿಧನ**

2013: ರಾಮಕೃಷ್ಣ ಹೆಗಡೆ, ಕರ್ನಾಟಕದ ಮಾಜಿ ಮುಖ್ಯಮಂತ್ರಿ

# ಎಲ್ಲವೂ ಹ್ಯಾಂಡ್ ಮೇಡ್ ಕಲೆಗಾರಿಕೆ ಶಿಲ್ಪ ಗುಲ್ ಗುಲಿಯಾ

**– ಗೊರೂರು ಅನಂತರಾಜು, ಹಾಸನ**



ಬೆಳಿಗ್ಗೆ ಶಿಗವಾಳ್ ಗ್ರಾಮಕ್ಕೆ ಹೊಳೆನರಸೀಪುರ ಕುಪ್ಪೆ ಮಾರ್ಗ ಕೇರಳಾಪುರಕ್ಕೆ ಪ್ರಯಾಣಿಸುತ್ತಿದ್ದೆ ಫೋನ್ ರಿಂಗಣಿಸಿತು. ಅತ್ತಲ್ಲಿಂದ ಚಿತ್ರ ಕಲಾವಿದ ಅತ್ನಿ ಸುರೇಶ್. ಸಾರ್, ನಿಮಗೆ ಆರ್ಟಿಸ್ಟ್ ಒಬ್ಬರ ಪರಿಚಯ ಮಾಡಿಕೊಡುವೆ ಎಲ್ಲಿದ್ದೀರಾ..? ನಮ್ಮ ಅಜ್ಜಿ ಊರಿಗೆ ಗೃಹ ಪ್ರವೇಶಕ್ಕೆ ಹೋಗುತ್ತಿದ್ದೇನೆ. ನಾಲ್ಕು ಗಂಟೆಗೆ ವಾಪಸ್ಸು ಬರುತ್ತೇನೆ ಎಂದೆ. ಬಂದು ಹಾಸನ ಗಾಂಧಿ ಬಜಾರ್ ಸರ್ಕಲ್ ಬಳಿಯ ಕಲಾವಿದೆಯ ಮನೆಗೆ ಹೋದೆವು. ಅವರ ಹೆಸರು ಶಿಲ್ಪ ಗುಲ್ ಗುಲಿಯಾ. ಗುಜರಾತಿನ ಭಿಲ್ ವಾಡದವರು. ಇವರ ತಂದೆ ಪಾರಸ್ ಮಲ್ ರಾಂಕ. ಓದಿರುವುದು ಬಿಎಸ್ಸಿ ಹೋಂ ಸೈನ್ಸ್. ಫ್ಯಾಷನ್ ಡಿಸೈನ್, ಸೋಶಿಯಾಲಾಜಿ ಎಂ.ಎ. ಇವರ ಪತಿ ಗೌರವ್ ಗುಲ್ ಗುಲಿಯಾ ನಮ್ಮನ್ನು ಅವರ ಮನೆಗೆ ಕರೆದೊಯ್ದಿದ್ದರು. ಇವರ ತಂದೆ ಶಾಂತಿಲಾಲ್ ತಾಯಿ ಪ್ರೇಮಲತಾ. ಇವರ ಕುಟುಂಬ 1992ರಿಂದ ಹಾಸನದಲ್ಲಿ ಚಿನ್ನ-ಬೆಳ್ಳಿ ವ್ಯಾಪಾರ ವಹಿವಾಟು ಮಾಡಿಕೊಂಡು ನೆಲೆಸಿದೆ. ತಮ್ಮ ಪತ್ನಿಯ ಕರಕುಶಲತೆ ಬಗ್ಗೆ ಗೌರವ್‌ಗೆ ಅಪಾರ ಗೌರವವಿದೆ. ಕುಟುಂಬದವರ ಪ್ರೋತ್ಸಾಹವೂ ಇದೆ.

ಕಾಫಿ ಕೊಟ್ಟರು. ಕುಡಿಯುತ್ತಾ ಮೇಡಂ ಜೋಡಿಸಿಡುತ್ತಿದ್ದ ಹ್ಯಾಂಡ್ ಮೇಡ್ ಮೆಟಿರಿಯಲ್ ನೋಡುತ್ತಾ ಇದನ್ನೆಲ್ಲಾ ಹೇಗೆ ರೂಪಿಸಿದಿರಿ ಕೇಳಿದೆ. ಮೇಡಂ ಕನ್ನಡ ಕಲಿತ್ತಿಲ್ಲ. ನಾನೆಂದು ಹಿಂದಿಯಲ್ಲಿ ಮಾತಾಡಿಲ್ಲ. ಈಗ ಇಂಗ್ಲೀಷ್ ನೆರವಾಯಿತು. ಅಲಂಕಾರಿಕ ವೃತ್ತಾಕಾರದ ನಾಲ್ಕೈದು ಕನ್ನಡಿಗಳ ಸುತ್ತಾ ಬಟ್ಟೆ ಬರೆಯ ಡಿಸೈನ್‌ಗಳು. ಮಧ್ಯೆ ಮುಖ ನೋಡಿಕೊಂಡೆ. ಫ್ಯಾಬ್ರಿಕ್ ಕಲರ್‌ನಲ್ಲಿ ರೂಪಿಸಿದ್ದ ಅದೇ ಕಣ್ಣು ಇದೇ ನನ್ನ ಕಣ್ಣಿಗೆ ಕಲಾತ್ಮಕವಾಗಿ ಕಂಡಿತು. ಗೋಡೆಗೆ ತೂಗು ಹಾಕಿದ್ದ ಗುಜರಾತಿ ಶೈಲಿಯ ನೀರೆಯ ಚಿತ್ರಪಟ ಆಕರ್ಷಿಸಿತು. ಸೀರೆ ಅಂಗಡಿಯಲ್ಲಿ ಈ ತರಹದ ಡಿಸೈನ್ ಸೀರೆ ನೋಡಿದ್ದೆ. ಇದು ಗುಜರಾತಿ ಶೈಲಿಯ ಸಾಂಪ್ರದಾಯಿಕ ಆರ್ಟ್ ವರ್ಕ್ ಎಂದರು. ಅವರ ರೆಸಿನ್ ಆರ್ಟ್, ಟ್ರೆಡಿಷನಲ್ ಪೈಂಟಿಂಗ್, ಫ್ಯಾಡ್ ಪೈಂಟಿಂಗ್ ಮತ್ತು ಜನಪದ ಕಲೆಗಳು ರಾಜಸ್ಥಾನಿ ಶ್ರೀಮಂತ ಕಲೆಗಳಾಗಿದ್ದವು. ಇವರ ಆರ್ಟಿಸ್ಟಿಕ್ ಜರ್ನಿ ಮೆಣದಬತ್ತಿ ತಯಾರಿಕೆ, ಹ್ಯಾಂಡ್ ಮೇಡ್ ಸೋಪ್ಸ್, ಹೇರ್ ಶ್ಯಾಂಪು, ಹ್ಯಾಂಡ್ ಕ್ರಾಫ್ಟ್, ಕುಸುರಿ ಕೆಲಸಗಳು, ಮನೆಯ ಅಲಂಕೃತ ವಸ್ತುಗಳು ನೋಡಲು ಸಾಮಾನ್ಯ ಎನಿಸಿದರೂ ಅದನ್ನು ರೂಪಿಸುವ ತಾಳ್ಮೆ ನಮಗೆ ಇರಬೇಕಲ್ಲ. ಕೈ ಚೀಲಗಳಿಗೂ ಚಿತ್ರ ಬಿಡಿಸಿದ್ದರು. ಜೆಲ್ಲಿ ಕ್ಯಾಂಡಲ್‌ನ್ನು ಪರಿಮಳ ಬೀರುವ ಪ್ರಕೃತಿದತ್ತ ಪದಾರ್ಥಗಳನ್ನು ಬಳಸಿ ತಯಾರಿಸಿದ್ದರು.

ಒಂದು ರೌಂಡ್ ಗ್ಲಾಸಿನೊಳಗೆ ಮೇಣದ ಬತ್ತಿ ಜೊತೆಗೆ ಜೆಲ್ ವ್ಯಾಕ್ಸ್ ತುಂಬಿ ಅದಕ್ಕೆ ಪಲಾವ್ ಮಾಡಲು ಬಳಸುವ ಚಕ್ರಮೊಗ್ಗು, ಯಾಲಕ್ಕಿ, ಲವಂಗ, ತಾರೆಹೂ ಸಾಂಬಾರ ಪದಾರ್ಥ ಬಳಸಿದ್ದರು. ಮೇಣದ ಬತ್ತಿ ಉರಿವಾಗ ಪರಿಮಳ ಬೀರುವುದಂತೆ! ಮನೆಯಲ್ಲಿಯೇ ತಾವೇ ತಯಾರಿಸುವ ಸೋಪುಗಳನ್ನು ಯಾವುದೇ ಕೆಮಿಕಲ್ ಬಳಸದೆ ನೈಸರ್ಗಿಕ ದಾಸವಾಳ, ಬೀಟ್ ರೂಟ್ ಅಲೊವೆರಾ ಇವೇ ಮೊದಲಾಗಿ ತ್ವಚೆಗೆ ಆರೋಗ್ಯಕರವಾದದ್ದನ್ನು ಬಳಸಿ ತಯಾರಿಸಿದ್ದಾಗಿ ತಿಳಿಸಿದರು. ಸೋಪು ಶ್ಯಾಂಪ್ಸ್‌ನ್ನು ಮನೆಗೆ ಬಂದು ಜನ ಖರೀದಿಸುವುದಾಗಿ ತಿಳಿಸಿದರು. ನೀವು ಹೊರಗೆ ಎಲ್ಲೂ ಈ ಕಲೆಯ ಪ್ರದರ್ಶನ ಮಾಡಿಲ್ಲವೇ ಕೇಳಿದೆ. ಮೈಸೂರು ಮಹಾರಾಜ ಗ್ರೌಂಡ್‌ನಲ್ಲಿ ಒಮ್ಮೆ ಮತ್ತು ಹಾಸನ ರಾಯಲ್ ಅಪೊಲೋ ಶಾಲೆಯಲ್ಲಿ ಇನ್ನೊಮ್ಮೆ ಪ್ರದರ್ಶನ ಮಾಡಿದ್ದೇನೆ ಎಂದು ಫೋಟೋ ಹಂಚಿಕೊಂಡರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248